## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1225 |
| ಸದಸ್ಯರ ಹೆಸರು | ಡಾ|| ಎಂ.ಜಿ ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 18.03.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರೈತರು ತಮ್ಮ ಕೃಷಿ ಭೂಮಿಯಲ್ಲಿನ ಕಲ್ಲು ಬಂಡೆಗಳನ್ನು ತೆಗೆಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಮಾರ್ಗಸೂಚಿ ಗಳಿವೆಯೇ; ಇದ್ದರೆ ಅವು ಯಾವುವು; | • ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 3-A(a) ರಂತೆ ಜಮೀನುಗಳನ್ನು ಕೃಷಿ ಯೋಗ್ಯ ಉದ್ದೇಶಕ್ಕಾಗಿ ಅಭಿವೃದ್ಧಿಪಡಿಸಲು / ಸಮತಟ್ಟು ಮಾಡಲು ಸಂಬಂಧಪಟ್ಟ ಕೃಷಿ ಇಲಾಖೆ ಅಧಿಕಾರಿಗಳಿಂದ ದೃಢೀಕರಣವನ್ನು ಪಡೆದು 12 ತಿಂಗಳ ಅವಧಿಯವರೆಗೆ ಕಲ್ಲುಬಂಡೆಗಳನ್ನು ತೆಗೆಯಲು ಜಮೀನಿನ ಮಾಲೀಕರಿಗೆ ಅನುಮತಿ ನೀಡಲಾಗುತ್ತದೆ.<br>• ಕಾರ್ಯಾನುಮತಿದಾರರು ಜಮೀನನ್ನು ಸಮತಟ್ಟು / ಕೃಷಿ ಯೋಗ್ಯ ಉದ್ದೇಶಕ್ಕ ಅಭಿವೃದ್ಧಿಪಡಿಸುವಾಗ ದೊರೆಯುವ ಕಲ್ಲನ್ನು ಸ್ವಂತ ಉದ್ದೇಶಕ್ಕಾಗಿ ಬಳಕೆ ಮಾಡಿದ್ದಲ್ಲಿ ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳನ್ನು ಸಂದಾಯ ಮಾಡುವಂತಿಲ್ಲ.<br>• ಸ್ವಂತ ಉದ್ದೇಶಕ್ಕೆ ಬಳಕೆ ನಂತರ ಉಳಿಯುವ ಕಲ್ಲನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಖನಿಜ ಸಾಗಾಣಿಕೆ ಪರವಾನಿಗೆ ಪಡೆದು ರಾಜಧನ ಮತ್ತು ಅನ್ವಯಿಕ ಶುಲ್ಕಗಳನ್ನು ಪಾವತಿಸಿ ಮಾರಾಟ ಮಾಡಬಹುದಾಗಿರುತ್ತದೆ.<br>• ಮುಂದುವರೆದು, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 35 ರಂತೆ ಪಟ್ಟಾ ಜಮೀನುಗಳಲ್ಲಿ ಸ್ವಂತ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರಿಯ ಪೂರ್ವಾನುಮತಿಯೊಂದಿಗೆ ಸಣ್ಣ ಪ್ರಮಾಣದಲ್ಲಿ ಉಪಖನಿಜ ವನ್ನು ತೆಗೆದು ಬಳಸಿಕೊಳ್ಳಲು ಅವಕಾಶವಿದ್ದು, ಈ ರೀತಿ ತೆಗೆದ ಉಪಖನಿಜವನ್ನು ವಾಣಿಜ್ಯ ಉದ್ದೇಶ/ಮಾರಾಟ ಮಾಡಲು ಅವಕಾಶವಿರುವುದಿಲ್ಲ. |

. . . 2

| | | |
|---|---|---|
| ಆ) | ಕೃಷಿ ಭೂಮಿಯಲ್ಲಿ ಯಾವ ಪ್ರಮಾಣದ ಬಂಡೆ ಕಲ್ಲುಗಳನ್ನು ತೆರವುಗೊಳಿಸಲು ಅನುಮತಿಯ ಅಗತ್ಯತೆ ಇದೆ; ಯಾವುದಕ್ಕೆ ಅಗತ್ಯ ಇರುವುದಿಲ್ಲ; ಅನುಮತಿ ಪಡೆಯಲು ಪಾವತಿಸಬೇಕಾದ ಶುಲ್ಕವೆಷ್ಟು; | • ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 3-A(a) ರಂತೆ ಜಮೀನುಗಳನ್ನು ಕೃಷಿ ಯೋಗ್ಯ ಉದ್ದೇಶಕ್ಕಾಗಿ ಅಭಿವೃದ್ಧಿಪಡಿಸಲು / ಸಮತಟ್ಟು ಮಾಡುವ ಪ್ರಕರಣಗಳಲ್ಲಿ ಇಂತಿಷ್ಟೆ ಪ್ರಮಾಣದ ಉಪಖನಿಜ ತೆಗೆಯಬೇಕೆಂಬ ಬಗ್ಗೆ ನಿಯಮಗಳಲ್ಲಿ ಉಲ್ಲೇಖವಿರುವುದಿಲ್ಲ. ಆದರೆ ಜಮೀನು ಸಮತಟ್ಟು ಮಾಡಿ ಕೃಷಿ ಯೋಗ್ಯ ಜಮೀನನ್ನಾಗಿ ಅಭಿವೃದ್ಧಿಪಡಿಸಿಕೊಳ್ಳುವ ಪ್ರಕರಣಗಳಲ್ಲಿ ಬಂಡೆ ತೆಗೆಯಲು ಸದರಿ ನಿಯಮದಂತೆ ಪಟ್ಟಾದಾರರು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಕಾರ್ಯಾನುಮತಿ ಪಡೆಯುವುದು ಕಡ್ಡಾಯವಿರುತ್ತದೆ.<br>• ಕಾರ್ಯಾನುಮತಿ ಪ್ರದೇಶದಲ್ಲಿ ದೊರೆಯುವ ಉಪ ಖನಿಜವನ್ನು ಸ್ವಂತ ಉದ್ದೇಶಕ್ಕೆ ಬಳಕೆ ನಂತರ ಉಳಿಯುವ ಉಪಖನಿಜವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಖನಿಜ ಸಾಗಾಣಿಕೆ ಪರವಾನಿಗೆ ಪಡೆದು ರಾಜಧನ ಮತ್ತು ಅನ್ವಯಿಕ ಶುಲ್ಕಗಳನ್ನು ಪಾವತಿಸಿ ಮಾರಾಟ ಮಾಡಬಹುದಾಗಿದ್ದು, ಪ್ರತಿ ಮೆಟ್ರಿಕ್ ಟನ್ ಕಟ್ಟಡ ಕಲ್ಲಿಗೆ ₹80/- ರಾಜಧನ ಹಾಗೂ ₹32/- ಹೆಚ್ಚುವರಿ ಪಾವತಿ ಮೊತ್ತ ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆ ₹8/-ಗಳನ್ನು ಸಂದಾಯ ಮಾಡಬೇಕಾಗಿರುತ್ತದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 35 ರಂತೆ ಪಟ್ಟಾ ಜಮೀನುಗಳಲ್ಲಿ ಸ್ವಂತ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರಿಯ ಪೂರ್ವಾನುಮತಿಯೊಂದಿಗೆ ಸಣ್ಣ ಪ್ರಮಾಣದಲ್ಲಿ ಉಪಖನಿಜವನ್ನು ತೆಗೆದು ಬಳಸಿಕೊಳ್ಳಲು ಮಾತ್ರ ಅವಕಾಶವಿದ್ದು, ಮಾರಾಟ ಮಾಡಲು ಅವಕಾಶವಿರುವುದಿಲ್ಲ. |
| ಇ) | ಕೃಷಿ ಭೂಮಿಯಲ್ಲಿ ಬಂಡೆಯನ್ನು ತೆರವುಗೊಳಿಸುವಾಗ ರೈತರಿಗೆ ಪ್ರಾಣಾಪಾಯವಾಗಿರುವುದು ಹಾಗೂ ಗಾಯಗೊಂಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ರೈತರಿಂದ ಹಣ ಪಾವತಿಸಿಕೊಂಡು ಸರ್ಕಾರ ದಿಂದಲೇ ಬಂಡೆಗಳನ್ನು ತೆರವು ಗೊಳಿಸಲು ಅವಕಾಶ ಇದೆಯೇ? (ಇದ್ದರೆ ಅದರ ವಿವರ ನೀಡುವುದು) | • ಅಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.<br>• ಸರ್ಕಾರದ ವತಿಯಿಂದ ಬಂಡೆಗಳನ್ನು ತೆರವುಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

ಸಂಖ್ಯೆ ಸಿಐ-ಎಂಎಂಎನ್/94/2025

S. S. Mallikarjun

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.